## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1131/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ವಿಜಯ್ ಕುಮಾರ್ | CW: 3 | PW: 3 |
| ತಂದೆಯ ಹೆಸರು | : | ಮಹೇಶ್ವರಪ್ಪ | | |
| ವಯಸ್ಸು | : | 65 | | |
| ವೃತ್ತಿ | : | ವ್ಯವಸಾಯ | | |
| ವಾಸಸ್ಥಳ | : | ಚೀಲೂರು | | |

ದಿನಾಂಕಃ 21.02.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ 1, 2 ಮತ್ತು 4 ರವರು ಗೊತ್ತು. ದಿಃ 13.11.2019 ರಂದು ಬೆಳಗ್ಗೆ 10.30 ರ ಸಮಯದಲ್ಲಿ ನಾನು ಮನೆಯಿಂದ ಬಸ್ ನಿಲ್ದಾಣದ ಕಡೆಗೆ ಹೋಗುತ್ತಿದ್ದಾಗ ಚಾಸಾ 2 ರವರ ಮನೆಯ ಹತ್ತಿರ ಗಲಾಟೆ ಆಗುತ್ತಿದ್ದರಿಂದ ನಾನು ಅಲ್ಲಿಗೆ ಹೋದೆ. ಅಲ್ಲಿ ಸುಮಾರು ಜನ ಇದ್ದರು. ಚಾಸಾ 1 ರವರಿಗೆ 3 ಮತ್ತು 4 ನೇ ಆರೋಪಿತರು ಹಿಡಿದು ಎಳೆದಾಡುತ್ತಿದ್ದರು. ಯಾಕೆ ಗಲಾಟೆ ಮಾಡಿಕೊಳ್ಳುತ್ತೀರಿ ಎಂದು ನಾನು ಬಿಡಿಸಿದೆ. ಈ ಸಂಬಂಧ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ–

ಗಲಾಟೆ ಸಮಯದಲ್ಲಿ ಆರೋಪಿಗಳು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದರು ಎಂದರೆ ಸರಿ. 1 ಮತ್ತು 2 ನೇ ಆರೋಪಿತರು ಸಹ ಚಾಸಾ 1 ರವರಿಗೆ ಕೈಗಳಿಂದ ಹೊಡೆದು ಹಲ್ಲೆ

ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಮು.ಮಾ 1 ರಿಂದ ಚಾಸಾ 1 ರವರ ಬೆನ್ನಿಗೆ ಹೊಡೆದಿರುತ್ತಾರೆ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. 2 ನೇ ಆರೋಪಿಯು ಮು ಮಾ 2 ರಿಂದ ಚಾಸಾ 1 ರವರಿಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. 2 ನೇ ಆರೋಪಿಯು ಚಾಸಾ 1 ರವರ ಸೀರೆ ಎಳೆದಾಡಿ ಅವಮಾನಪಡಿಸಿರುತ್ತಾರೆ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳೆಲ್ಲರೂ ಚಾಸಾ 1 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನನ್ನ ಜೊತೆ ಚಾಸಾ 4 ರವರು ಸಹ ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಜಗಳವಾದ ನಂತರ ಚಾಸಾ 2 ರವರು ಸ್ಥಳಕ್ಕೆ ಬಂದು ಚಾಸಾ 1 ರವರನ್ನು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಜಗಳದ ವಿಚಾರವನ್ನು ನಾನು ಚಾಸಾ 1 ರವರಿಂದ ಕೇಳಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. 1 ಮತ್ತು 2 ನೇ ಆರೋಪಿತರು ಚಾಸಾ 1 ರವರ ಮೇಲೆ ಹಲ್ಲೆ ಮಾಡಿದರೂ ಸಹ ನಾನು ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ.ಹೆಚ್ ಎಂ ಎಸ್ ವಕೀಲರಿಂದಃ-

ಚಾಸಾ 2 ರವರು ನನಗೆ ಹೇಗೆ ಪರಿಚಯ ಎಂದರೆ ನಾವಿಬ್ಬರೂ ಸಹಪಾಠಿಗಳು ಎಂದು ನುಡಿಯುತ್ತಾರೆ. ನಾನು ಮತ್ತು ಚಾಸಾ 2 ರವರು ವಿಶ್ವಾಸಿಗರು ಎಂದರೆ ಸರಿ. ಘಟನಾ ಸ್ಥಳದಲ್ಲಿ ಎಷ್ಟು ಜನ ಸೇರಿದ್ದರು ಎಂದರೆ ಸಾಕ್ಷಿ ಸುಮಾರು 25-30 ಜನ ಎಂದು ನುಡಿಯುತ್ತಾರೆ. ಸದರಿ ಜನಗಳ ಹೆಸರು ಎಂದರೆ ಗೊತ್ತಿಲ್ಲ. ಗಲಾಟೆಯ ಸ್ಥಳ ಯಾವುದು ಎಂದರೆ ಸಾಕ್ಷಿಯು ಆರೋಪಿಗಳ ಹಾಗೂ ಚಾಸಾ 2 ರವರ ಸೈಟ್ ಎಂದು ನುಡಿಯುತ್ತಾರೆ. ಸೈಟ್ ಎಂದರೆ ಖಾಲಿ ಜಾಗ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಇದೇ ಮೊದಲ ಬಾರಿಗೆ ಹೇಳಿಕೆ ನೀಡುತ್ತಿದ್ದೇನೆಂದರೆ ಸರಿ. ಚಾಸಾ 2 ರವರ ಜೊತೆ ನಾನು ವಿಶ್ವಾಸದಿಂದ ಇರುವುದರಿಂದ ಯಾವುದೇ ಗಲಾಟೆ ನೋಡಿಲ್ಲದೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 1 ರವರು ಹೇಳಿದ್ದನ್ನು ನಾನು ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆಂದರೆ ಸರಿ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.